ಶ್ರೀ ಜೆ.ಹೆಚ್. ಪಟೇಲ್.—ಈಗಾಗಲೇ ಹೇಳಿದ್ದೇನೆ, ಹಣ ಬಿಡುಗಡೆ ಮಾಡಿದ್ದೇವೆ. ಅದು ಇಲ್ಲಿಯವರೆಗೂ ತಲುಪದೇ ಇದ್ದರೆ, ಇದರ ಬಗ್ಗೆ ನಮ್ಮ ಅಧಿಕಾರಿಗಳಿಗೆ ಹೇಳುತ್ತೇನೆ. ನಮ್ಮ ನಿಯಮಗಳು ಏನಿವೆ ಅದರ ಪ್ರಕಾರ, ೫೦೦ ರೂಪಾಯಿಗಳು ಲುಕ್ಸಾನು ಆಗಿದ್ದರೆ ಎಷ್ಟು ಕೊಡಬೇಕು, ೫೦೦ಕ್ಕಿಂತ ಸ್ವಲ್ಪ ಲುಕ್ಸಾನು ಆಗಿದ್ದರೆ ಎಷ್ಟು ಕೊಡಬೇಕು ಎಂಬುದನ್ನು ನಮ್ಮ ನಾರಮ್ಸ್ ಪ್ರಕಾರ, ಆಸ್ತಿ ಏನಿರುತ್ತದೆ ಅದರ ಆಧಾರದ ಮೇಲೆ ಏನು ಹಣ ಬಿಡುಗಡೆ ಮಾಡಬೇಕೋ ಅದನ್ನು ತಕ್ಷಣ ಕೊಡುವುದಕ್ಕೆ ಅಧಿಕಾರಿಗಳಿಗೆ ಹೇಳುತ್ತೇನೆ? ಇನ್ನು ಅಗ್ನಿಶಾಮಕ ಠಾಣೆ ಬಗ್ಗೆ ಹೇಳಿದ್ದಾರೆ. ಇದನ್ನು ವಿಚಾರ ಮಾಡುತ್ತೇನೆ. ತಿಪಟೂರಿನಲ್ಲಿ ಇದನ್ನು ಮೆಯಿನ್‌ಟೇನ್ ಮಾಡುವುದು ಹೇಗೆ, ಮುನಿಸಿಪಾಲಿಟಿಯವರು ಇದನ್ನು ಮೆಯಿನ್‌ಟೇನ್ ಮಾಡುತ್ತಾರೆಯೇ ಅಥವಾ ಮಂಡಲದವರು ಮೆಯಿನ್‌ಟೇನ್ ಮಾಡುತ್ತಾರೆಯೇ ಎಂಬುದನ್ನು ವಿಚಾರ ಮಾಡುತ್ತೇನೆ.

ಶ್ರೀ ಬಿ. ಲಕ್ಕಪ್ಪ.—ತಹಶೀಲ್ದಾರರು ೫೦೦ ರೂಪಾಯಿಗಳನ್ನು ಕೊಡುತ್ತಾರೆ. ಮುನಿಸಿಪಾಲಿಟಿಯವರು ಹಣವಿದ್ದರೆ, ನೂರು ರೂಪಾಯಿ ಕೊಡುತ್ತಾರೆ, ಹೀಗೆ ಒಟ್ಟು ಅವರಿಗೆ ೧೫೦೦ ರೂಪಾಯಿಗಳವರೆಗೆ ಪರಿಹಾರ ಸಿಗುತ್ತದೆ. ಆದರೆ ಇಲ್ಲಿ ವಿಶೇಷ ಆದ್ಯತೆ ಮೇಲೆ ಪರಿಹಾರ ಕೊಡಬೇಕಾಗುತ್ತದೆ. ಇಷ್ಟು ನಷ್ಟ ಆಗಿದ್ದರೆ, ಇಷ್ಟು ಪರ್ಸೆಂಟ್ ಕೊಡುತ್ತೇವೆಂದು ಹೇಳಿದರೆ ಸಮಸ್ಯೆ ಬಗೆಹರಿಯುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿ, ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಹಣ ಕೊಡಿಸುವ ವ್ಯವಸ್ಥೆ ಮಾಡಬೇಕು, ಏಕೆಂದರೆ ಇಲ್ಲಿ ಬಹಳ ಸೊಂದಿರುವವರು ಇದ್ದಾರೆ. ಅಲ್ಲಿ ಬಹಳ ಜನ ಸಾಲ ಸೋಲ ಮಾಡಿ ಅಂಗಡಿ ಇಟ್ಟಿದ್ದರು ಅದ್ದರಿಂದ ಕೊನೆಯ ಪಕ್ಷ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ತಲಾ ೨,೦೦೦ ರೂಪಾಯಿಗಳನ್ನಾದರೂ ಕೊಡಿಸತಕ್ಕಂಥ ಪ್ರಯತ್ನವನ್ನು ತಾವು ಮಾಡಬೇಕು.

ಶ್ರೀ ಜೆ.ಹೆಚ್ ಪಟೇಲ್.—ಏನಾದರೂ ಅನಾಹುತ ಆಗಿ ಸತ್ತಿದ್ದರೆ, ಪ್ರಾಣ ಹಾನಿ ಆಗಿದ್ದರೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಕೊಡಿಸಬಹುದು. ಆದರೆ, ಆಸ್ತಿ ಹಾನಿ ಬಗ್ಗೆ ಆ ರೀತಿ ಕೊಡುವುದಕ್ಕೆ ಬರುವುದಿಲ್ಲ.

(iii) ದಿನಾಂಕ ೨೮-೨-೮೯ರಂದು ಶಿಕಾರಿಪುರ ತಾಲ್ಲೂಕು ಅಂಬ್ಲಿಗೊಳ ಗ್ರಾಮದಲ್ಲಿ, ಟಾಕ್ಯನಾಯ್ಕ ಮತ್ತು ಮೂಕ ನಾಗೇಂದ್ರಪ್ಪ ಇವರುಗಳಿಗೆ ಅರಣ್ಯ ಸಂರಕ್ಷಣಾಧಿಕಾರಿಯವರು ಬೆತ್ತಲೆ ಮಾಡಿಸಿ ಮೆರವಣಿಗೆ ಮಾಡಿರುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೇ, ದಿನಾಂಕ ೨೮-೨-೮೯ರಂದು ಶಿಕಾರಿಪುರ ತಾಲ್ಲೂಕು, ಅಂಬ್ಲಿಗೊಳ ಗ್ರಾಮದಲ್ಲಿ ಇದೇ ತಾಲ್ಲೂಕಿನ ಸಾಲೂರುವಾಸಿಗಳಾದ ಟಾಕ್ಯನಾಯ್ಕ ಮತ್ತು ಮೂಕ ನಾಗೇಂದ್ರಪ್ಪ ಇವರುಗಳನ್ನು ಶಿಕಾರಿಪುರದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರು ಖುದ್ದಾಗಿ ಬೆತ್ತಲೆ ಮಾಡಿಸಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ (ಕೃಷಿ ಮತ್ತು ಅರಣ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳ ಪರವಾಗಿ ಈ ಗಮನ ಸೆಳೆಯುವ ಸೂಚನೆಗೆ, ಈ ಕೆಳಕಂಡಂತೆ ಉತ್ತರವನ್ನು ಕೊಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಶ್ರೀ ಶಿವರಾಜ್ ಸಿಂಗ್, ಐ.ಎಫ್.ಎಸ್. ಇವರು ಈಗ ಪ್ರೊಬೇಷನರ್ ಇದ್ದು ಶಿಕಾರಿಪುರ ರೇಂಜ್‌ನಲ್ಲಿ ದಿನಾಂಕ ೧-೧೧-೮೯ರಿಂದ ಕೆಲಸ ನಿರ್ವಹಿಸುತ್ತಿದ್ದಾರೆ.

ದಿನಾಂಕ ೨೮-೨-೮೯ರಂದು ಗಾಮ ಹಳ್ಳಿಗೆ ಸೇರಿದ ಜನರು ಕರಡಿಬೆಟ್ಟ ಅರಣ್ಯದಲ್ಲಿ ಮರ ಸೌದೆಗಳನ್ನು ಕದ್ದು ತರಲು ಹೋಗಿದ್ದಾರೆಂದು ಸುದ್ದಿ ತಿಳಿದು ಅದನ್ನು ತಡೆಯಲು ಆ ಕಡೆ ಹೋದರು. ಹೋಗುತ್ತಿರುವಾಗ ದಾರಿಯಲ್ಲಿ ಗಾಡಿಯಲ್ಲಿ ಸೌದೆಯನ್ನು ಸಾಗಿಸುತ್ತಿರುವುದನ್ನು ಕಂಡು ಅದನ್ನು ನಿಲ್ಲಿಸಿದರು. ಗಾಡಿಯಲ್ಲಿದ್ದವರು ಅವರ ತಪ್ಪನ್ನು ಒಪ್ಪಿಕೊಂಡು ಈ ಪ್ರಕರಣವನ್ನು ಕಾಂಪೌಂಡ್ ಮಾಡಿಕೊಳ್ಳುತ್ತೇವೆಂದು ಒಪ್ಪಿದರು. ಮುಂದಿನ ಕ್ರಮಕ್ಕಾಗಿ ಅಂಬೆಗೋಳ ಅರಣ್ಯ ವಿಶ್ರಾಂತಿ ಗೃಹಕ್ಕೆ ಈ ಗಾಡಿಯನ್ನು ತೆಗೆದುಕೊಂಡು ಹೋಗುವಂತೆ ಆದೇಶ ನೀಡಿ. ಶ್ರೀ ಶಿವರಾಜ್ ಸಿಂಗ್‌ರವರು ಕಾಡಿನಲ್ಲಿ ಮುಂದೆ ಹೋದರು.

ಆಗ ಮಂತ್ರಿ ಇನ್ನೊಂದು ಗಾಡಿಯಲ್ಲಿ ಇನ್ನೊಬ್ಬರು ಸೌದೆ ತುಂಬಿಸಿಕೊಂಡು ಬರುವುದನ್ನು ಕಂಡರು. ಈ ಗಾಡಿಯಲ್ಲಿದ್ದವರಲ್ಲಿ ಒಬ್ಬರನ್ನು ಕರೆದುಕೊಂಡು ಅಂಬೆಗೋಳ ಅರಣ್ಯ ವಿಶ್ರಾಂತಿ ಗೃಹಕ್ಕೆ ಹೋದರು. ಈ ರೀತಿ ಈ ಎರಡೂ ಗಾಡಿಗಳಲ್ಲಿದ್ದ ಇಬ್ಬರನ್ನು ಅಂಬೆಗೋಳ ಅರಣ್ಯ ವಿಶ್ರಾಂತಿ ಗೃಹಕ್ಕೆ ಕರೆದುಕೊಂಡು ಹೋಗಲಾಯಿತು. ಇವರ ಹೆಸರುಗಳು ಶ್ರೀ ಟಕರ್ ನಾಯಕ್ ಮತ್ತು ಶ್ರೀ ನಾಗೇಂದ್ರ.

ಅಂಬೆಗೋಳಕ್ಕೆ ಹೋದ ನಂತರ ಅಲ್ಲಿಯ ಸುದ್ದಿಯ ಪ್ರಕಾರ ಕಾಡಿನಲ್ಲಿ ಇನ್ನೂ ಹೆಚ್ಚು ಜನರು ಹೋಗಿದ್ದಾರೆಂಬ ವಿಷಯ ಅವರಿಗೆ ತಿಳಿಯಿತು. ಆಗ ಅವರು ಅಲ್ಲಿಯ ಅರಣ್ಯ ಸಿಬ್ಬಂದಿಯನ್ನು ಒಟ್ಟುಗೂಡಿಸಿ ಈ ಸನ್ನಿವೇಶವನ್ನು ಯಾವ ರೀತಿಯಲ್ಲಿ ಎದುರಿಸಬೇಕೆಂದು ಯೋಜಿಸಿದರು.

ಮುಂದೆ ಅರಣ್ಯಾಧಿಕಾರಿ ಕರಡಿಬೆಟ್ಟದಲ್ಲಿ ಕಳ್ಳತನ ಸಾಗಾಣಿಕೆ ಬಗ್ಗೆ ''ಗಾಮಾ'' ಹಳ್ಳಿಯ ನೂರಾರು ಜನರು ಹೋಗಿದ್ದಾರೆಂದು ತಿಳಿದು ಅಲ್ಲಿಗೆ ಹೋಗಿ ಸುಮಾರು ಒಂದೂವರೆ ಲಕ್ಷ ರೂಪಾಯಿ ಮೌಲ್ಯದ ಮರಗಳನ್ನು ಕಳ್ಳ ಸಾಗಾಟನೆ ಮಾಡುತ್ತಿದ್ದುದನ್ನು ತಡೆಗಟ್ಟಿದ್ದಾಗ ಕತ್ತಿ, ಕೊಡಲಿ, ಮಚ್ಚುಗಳಿಂದ ಹಲ್ಲೆ ಮಾಡಲು ಪ್ರಯತ್ನಿಸಿದರು. ಪ್ರಾಣ ಭಯದಿಂದ ಇವರು ಆಕಾಶಕ್ಕೆ ಗುಂಡು ಹಾರಿಸಬೇಕಾಯಿತು. ಮತ್ತು ಜೀವ ಉಳಿಸಿಕೊಳ್ಳಲು ಅರಣ್ಯ ಸಿಬ್ಬಂದಿಯವರು ಕಾಡಿನಲ್ಲಿ ಅಡಗಿಕೊಳ್ಳಬೇಕಾಯಿತು. ಈ ಜಗಳದಲ್ಲಿ ಒಬ್ಬ ಅರಣ್ಯ ಸಿಬ್ಬಂದಿ ಮತ್ತು ಶ್ರೀ ಶಿವರಾಜ್ ಸಿಂಗ್ ರವರಿಗೆ ಗಾಯ ಕೂಡ ಆಯಿತು. ಶ್ರೀ ಶಿವರಾಜ್ ಸಿಂಗ್‌ರವರು ಇದರ ಬಗ್ಗೆ ಪೋಲೀಸ್ ಕಂಪ್ಲೆಂಟ್ ಕೊಟ್ಟಿರುತ್ತಾರೆ. ಮತ್ತು ಅದು ತನಿಖೆಯಾಗುತ್ತಿದ್ದು, ಇದರ ಸಂಬಂಧದಲ್ಲಿ ೨೬ ಜನರನ್ನು ಬಂಧಿಸಿ ಬಿಡಲಾಗಿದೆ. ಇದು ಕ್ರೈಮ್ ನಂ. ೩೩ ದಿನಾಂಕ ೧೩-೩-೮೯ರಲ್ಲಿ ಶಿಕಾರಿಪುರ ಪೋಲೀಸ್ ಠಾಣೆಯಲ್ಲಿ ದಾಖಲಾಗಿದೆ.

ಈ ಅಧಿಕಾರಿಯು ಶಿಕಾರಿಪುರಕ್ಕೆ ದಿನಾಂಕ ೧-೧೧-೮೯ರಲ್ಲಿ ರಂದು ಹಾಜರಾದ ನಂತರ ೧೫ಕ್ಕೂ ಪ್ರಕರಣಗಳನ್ನು ದಾಖಲು ಮಾಡಿದ್ದಾರೆ. ಇದಲ್ಲದೆ ೧ ಟನ್ ಗಂಧ ಮತ್ತು ಇತರೆ ಮರಗಳನ್ನು ಸೇರಿ ಸುಮಾರು ೫ ಲಕ್ಷ ಬೆಲೆ ಬಾಳುವ ಅರಣ್ಯ ಸಂಪತ್ತನ್ನು ವಶಪಡಿಸಿಕೊಂಡಿದ್ದಾರೆ. ಈ ಅಧಿಕಾರಿಯು ಕಾಡಿಗೆ ಹೋಗಿದ್ದಾಗ ೪ ಸಲ ಹಲ್ಲೆ ಪ್ರಯತ್ನಗಳು ನಡೆದಿವೆ. ಈ ಅಧಿಕಾರಿ ಅರಣ್ಯ ಗಸ್ತು ಮಾಡುವುದು ಮತ್ತು ಅರಣ್ಯ ಸಂಪತ್ತಿನ ರಕ್ಷಣೆ ಬಗ್ಗೆ ಬಹಳಷ್ಟು ಮತುವರ್ಜಿ ವಹಿಸಿ ಕೆಲಸ ಕೆಲಸ ಮಾಡುತ್ತಿದ್ದಾರೆ.

ಶ್ರೀ ಟಾಕ್ರ ನಾಯಕ್ ರವರು ದಿನಾಂಕ ೧-೩-೮೯ರಂದು ಪೋಲೀಸ್ ಸ್ಟೇಷನ್‌ಗೆ ಬಂದು ತನ್ನನ್ನು ಅರಣ್ಯಾಧಿಕಾರಿಗಳು ನಿರ್ವಸ್ತ್ರವಾಡಿ ಮೆರವಣಿಗೆ ಮಾಡಿದರೆಂದು ದೂರು ಕೊಟ್ಟಿದ್ದು ನಿಜ ಇದರ ಮೇಲೆ ಪೋಲೀಸ್ ಠಾಣಾಧಿಕಾರಿಗಳು ಈ ಪ್ರಕರಣವನ್ನು ದಾಖಲೆ ಮಾಡಿ ಇದನ್ನು ''ನಾನ್ ಕಾಗ್ನಿಜಿಬಲ್'' ಅಪರಾಧವೆಂದು ಪರಿಗಣಿಸಿ ಮುಂದಿನ ತನಿಖೆ ಮಾಡದೆ ನ್ಯಾಯಾಲಯಕ್ಕೆ ಹೋಗ ಬಹುದೆಂದು ತಿಳಿಸಿದರು. ತದನಂತರ ಶ್ರೀ ಟಾಕ್ರ ನಾಯ್ಕರು ಸೂಪರಿಂಟೆಂಡೆಂಟ್ ಆಫ್ ಪೋಲೀಸ್, ಶಿವಮೊಗ್ಗ, ಇವರಿಗೆ ಇದೇ ರೀತಿಯ ಮೂರು ಕೊಟ್ಟ ಮೇಲೆ ಸೂಪರಿಂಟೆಂಡೆಂಟ್ ಆಫ್ ಪೋಲೀಸ್, ಶಿವಮೊಗ್ಗ ಮತ್ತು ಶಿವಮೊಗ್ಗದ ಜಿಲ್ಲಾಧಿಕಾರಿಗಳು ೧೪-೩-೮೯ರಂದು ಶಿಕಾರಿಪುರಕ್ಕೆ ಭೇಟಿ ಕೊಟ್ಟು ವಿಚಾರಣೆಮಾಡಿ ಕ್ರೈಮ್ ನಂ. ೪೨/೮೯ ಭಾರತ ದಂಡ ಸಂಹಿತೆಯ ಪ್ರಕರಣ ೨೮೨ನ್ನು ಕಾಗ್ನಿಜಿಬಲ್ ಅಪರಾಧವೆಂದು ಪರಿಗಣಿಸಿ ೩೪೧, ೫೦೦ರ ಜೊತೆ ಓದಲಾದ ೩೪೨ನೇ ಪ್ರಕರಣದ ಮೇರೆಗೆ ಕೇಸು ನೋಂದಾಯಿಸಲು ಸೂಚನೆ ಕೊಟ್ಟರು. ಇದರ ಪ್ರಕಾರ ದಿನಾಂಕ ೧೫-೩-೮೯ರಂದು ಕೇಸು ದಾಖಿಲ್ಮಾಡಲಾಗಿದೆ.

ಈ ಪ್ರಸಂಗದಲ್ಲಿ ಆದ ವಿಳಂಬಕ್ಕೆ ಸಬ್ ಇನ್ಸ್‌ಪೆಕ್ಟರ್ ಶಿಕಾರಿಪುರ ಇವರ ಮೇಲೆ ಇಲಾಖಾ ವಿಚಾರಣೆಯನ್ನು ನಡೆಸಲಾಗುತ್ತಿದೆ.

ಶ್ರೀ ಶಿವರಾಜ್ ಸಿಂಗ್ ರವರನ್ನು ತಮ್ಮ ರೇಂಜ್ ತರಬೇತಿ ವಂಗಿದ ನಂತರ ದಿನಾಂಕ ೧೫-೩-೮೯ರಿಂದ ಬೇರೆ ಕಡೆ ತರಬೇತಿ ಪಡೆಯಲು ನೇಮಿಸಲಾಗಿದೆ.

ಶ್ರೀ ಶಿವರಾಜ್ ಸಿಂಗ್ ರವರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಸಮಯಾದಲ್ಲಿ ತಮ್ಮ ಮೇಲೆ ಮಾಡಲಾದ ಹಲ್ಲೆಯ ಮೇಲೆ ದೂರು ಕೊಟ್ಟಿರುವುದು ಮತ್ತು ಶ್ರೀ ಟಾಕ್ರ ನಾಯಕ್ ದೂರು ಕೊಟ್ಟಿರುವುದು ಇವೆರಡೂ ಪ್ರಕರಣಗಳಲ್ಲಿ ಪೋಲಿ ಸ್ಸರವರಿಂದ ತನಿಖೆ ಮುಂದುವರಿಯುತ್ತಿದೆ. ತನಿಖೆ ವಂಗಿದ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

† ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ೨೮-೨-೮೯ರಂದು ಸಾಲೂರು ಗ್ರಾಮದ ಇಬ್ಬರು ದಲಿತ ಯುವಕರು ಗಾಡಿಯಲ್ಲಿ ಒಣಕಟ್ಟಿಗೆಯನ್ನು ಕಾಡಿನಿಂದ ತರುವಂತಹ

ಸಂದರ್ಭದಲ್ಲಿ, ಸಾಲೂರು ಗ್ರಾಮಕ್ಕೆ ಬಂದಾಗ ಎದುರಿನಿಂದ ಬಂದಂಥ ಎ.ಸಿ.ಎಫ್.ರವರು, ಗಾಡಿಯನ್ನು ತನಿಖೆ ಮಾಡಿ ಆದರಲ್ಲಿ ಒಣಕಟ್ಟಿಗೆ ಇದೆ ಎಂದು ಗೊತ್ತುಮಾಡಿಕೊಂಡು, ಗಾಡಿಯನ್ನು ಕಳುಹಿಸಿಕೊಟ್ಟು, ಗಾಡಿಯಲ್ಲಿ ಇದ್ದಂಥ ಟಾಕ್ಯಾ ನಾಯಕರು ಎನ್ನುವವನನ್ನು ಜೀಪ್‌ನಲ್ಲಿ ಕೂರಿಸಿಕೊಂಡು ಮುಂದೆ ಹೋದರು. ಮುಂದೆ ಹೋದಾಗ ರಸ್ತೆಯಲ್ಲಿ ಮತ್ತೊಂದು ಗಾಡಿ ಒಣಕಟ್ಟಿಗೆ ತುಂಬಿಕೊಂಡು ಬರುತ್ತಿರುವುದನ್ನು ನೋಡಿದರು. ಅದೇ ಗ್ರಾಮದ ನಾಗೇಂದ್ರಪ್ಪ ಎಂಬ ಮೂಕ ಈ ಗಾಡಿಯನ್ನು ಹೊಡೆದುಕೊಂಡು ಬರುತ್ತಿದ್ದ. ಆ ಗಾಡಿಯನ್ನೂ ಸಹ ಇದೇ ಎ.ಸಿ.ಎಫ್.ರವರು ಚೆಕ್ ಮಾಡಿ ಒಣಕಟ್ಟಿಗೆ ಇದೆ ಎಂದು ಗೊತ್ತಾದ ಮೇಲೆ, ಅವನನ್ನೂ ಕೂರಿಸಿಕೊಂಡು ಅಂಬೆಗೋಳ ಫಾರೆಸ್ಟ್ ಗೆಸ್ಟ್ ಹೌಸ್‌ಗೆ ಕರೆದುಕೊಂಡು ಹೋಗಿ, ಅವರನ್ನು ಬೆತ್ತಲೆ ಮಾಡಿ, ಇದೇ ಎ.ಸಿ.ಎಫ್. ರವರು ಜೀಪ್‌ನಲ್ಲಿ ವೆರವಣಿಗೆಯಲ್ಲಿ ಕರೆದು ಕೊಂಡು ಹೋದರು ಎಂಬುದು ಸತ್ಯ ಘಟನೆ. ಇದರ ಬಗ್ಗೆ ನಾನು ನೇರವಾಗಿ ತಮ್ಮಿಂದ ಒಂದೆರಡು ಉತ್ತರವನ್ನು ಬಯಸುತ್ತೇನೆ. ಟಾಕ್ಯಾ ನಾಯಕನು ೧೫-೩-೮೯ರಂದು ಪೋಲೀಸ್ ಸ್ಟೇಷನ್‌ಗೆ ಬಂದು ಒಂದು ದೂರನ್ನು ಕೊಟ್ಟಿದ್ದಾನೆ. ಆ ದೂರಿನಲ್ಲಿ ಸ್ಪಷ್ಟವಾಗಿ ಇರುವಂತಹ ಒಂದು ಸಂಗತಿ ಎಂದರೆ, ನನ್ನ ಡಾಯರ್‌ನ್ನು ಬಿಚ್ಚಿಸಬೇಡಿ ಎಂದು ಎ.ಸಿ.ಎಫ್. ರವರಿಗೆ ಎಷ್ಟು ಹೇಳಿದರೂ ಕೇಳದೇ, ನನ್ನ ಡ್ರಾಯರ್‌ನ್ನು ಬಿಚ್ಚಿಸಿ, ಜೀಪ್ ಮುಂದೆ ಹೋಗಲು ಹೇಳಿದರು. ನನ್ನನ್ನು ಬೆರೆ ಏನು ಬೇಕಾದರೂ ಮಾಡಿ, ಇದು ಮಾಡಬೇಡಿ ಎಂದು ಎಷ್ಟು ಹೇಳಿದರೂ ಕೇಳದೇ, ನನ್ನ ಡ್ರಾಯರ್ ಬಿಚ್ಚಿಸಿ ಅಲ್ಲಿಂದಲ್ಲಿಂ ಬರೀ ಬೆತ್ತಲೆಯಾಗಿ ವೆರವಣಿಗೆ ಮಾಡಿಸಿದರು. ಅಷ್ಟರಲ್ಲಿ ಶಾಲೆ ಬಿಟ್ಟಿತು. ನನಗೆ ಮುಂದೆ ಹೋಗಲಂ ನಾಚಿಕೆಯಾಗಿ, ಮುಂದೆ ಹೋಗದೆ ನಿಂತುಕೊಂಡೆ. ಅಷ್ಟರಲ್ಲಿ ಯಾರೋ ಒಬ್ಬರು ಬಂದು ಅವರಿಗೆ ಏನೋ ಹೇಳಿದರು. ಆಮೇಲೆ ಅವರಂ ನನ್ನನ್ನು ಬಿಟ್ಟು ಕಳುಹಿಸಿದರು. ಈ ಮೇಲ್ಕಂಡ ಘಟನೆಯಿಂದ ನನ್ನ ಮನಸ್ಸಿಗೆ ತುಂಬಾ ನೋವಾಗಿದೆ. ಅಲ್ಲದೇ ಈ ಘಟನೆ ನಡೆದ ಮೇಲೆ ನನಗೆ ತುಂಬಾ ಅವಮಾನವಾಗಿರುತ್ತದೆ. ಈ ಎ.ಸಿ.ಎಫ್.ರವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ ಎಂದು ೧೫-೩-೮೯ರಂದು ಈ ಟಾಕ್ಯಾನಾಯಕ್ ಕಂಪ್ಲೇಂಟ್ ಕೊಟ್ಟಿರುತ್ತಾನೆ.

ಸ್ವಾಮಿ ನಾನು ತಮ್ಮನ್ನು ಕೇಳುವುದು ಒಂದೇ ಒಂದು ಮಾತು. ಈಗ ನೀವು ಕೊಟ್ಟಿರತಕ್ಕಂಥ ಉತ್ತರದ ರೀತ್ಯ ಕಳ್ಳಸಾಗಾಣಿಕೆ ನಡೆಯುತ್ತಿದ್ದರೆ ಗಂಧದ ಕಳ್ಳಸಾಗಾಣಿಕೆಯಾಗುತ್ತಿದ್ದರೆ ಅಥವಾ ನಾಟ ಕಳ್ಳಸಾಗಾಣಿಕೆಯಾಗುತ್ತಿದ್ದರೆ ಯಾವುದೇ ಕ್ರಮವಹಿಸುವುದನ್ನು ತಾವು ತೆಗೆದುಕೊಂಡರೂ ಸಹ ಅದಕ್ಕೆ ನಮ್ಮ ಬೆಂಬಲ ಇದೆ. ಇದೇ ಸದನದಲ್ಲಿ ನಾವು ಅರಣ್ಯ ಲೂಟಿಯಾಗುತ್ತಿದೆ ಅದನ್ನು ನಿಲ್ಲಿಸಿ ಎಂದು ಹೇಳಿದ್ದೇವೆ. ಆದರೆ ಅದು ಇದಕ್ಕೆ ಸಂಬಂಧವಿಲ್ಲದೆ ಇರುವಂತಹ ವಿಷಯ. ನಾನು ಪ್ರಸ್ತಾಪ ಮಾಡಬೇಕೆಂದಿರುವ ಒಂದೇ ಒಂದು ವಿಷಯವೆಂದರೆ ೧೫-೩-೮೯ರಲ್ಲಿ ಟಾಕ್ಯಾನಾಯಕ್ ದೂರು ಕೊಟ್ಟ ಮೇಲೆ ದಿನಾಂಕ ೧೫-೩-೮೯ರವರೆಗೂ ಎಫ್‌ಐಆರ್ ಹಾಕದೆ ಇರಲು ಕಾರಣವೇನು? ಅವರು ಎಫ್ ಐಆರ್‌ನಲ್ಲಿ ತಾರೀಖು ೧೫-೩-೮೯ ಗಂಟೆ ೧೯-೩೦ ಎಂದು ಬರೆದಿದ್ದಾರೆ. ಎಫ್‌ಐಆರ್ ಕಾಪಿ ನನ್ನ ಬಳಿ ಇದೆ. ಆ ಪ್ರಕಾರ ನಾನು ತಮ್ಮಲ್ಲಿ ಕೇಳುವುದೇನೆಂದರೆ ಯಾವುದೇ ಒಬ್ಬ ಯುವಕನಾಗಲಿ ಅಥವಾ ವ್ಯಕ್ತಿಗೆ ಆಗಲಿ ಈ ರೀತಿ ಅಮಾನುಷ ಕೃತ್ಯವನ್ನು ಎಸಗಿರುವಾಗ ಆತ ೧೫-೩-೮೯ರಂದು ದೂರು ಕೊಟ್ಟಿದ್ದರೂ ಸಹ ೧೫-೩-೮೯ರವರೆಗೂ ಎಫ್‌ಐಆರ್ ಹಾಕದೆ ಇಟ್ಟುಕೊಂಡಿರಲು ಕಾರಣವೇನು? ಇದಕ್ಕೆ ತಾವು ದಯವಿಟ್ಟು ಉತ್ತರವನ್ನು ಕೊಡಬೇಕು. ಮತ್ತು...

ಅಧ್ಯಕ್ಷರು.— ಮಾನ್ಯ ಯಡಿಯೂರಪ್ಪನವರೇ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಈ ಪ್ರಕರಣದಲ್ಲಿ ಇಲಾಖಾ ವಿಚಾರಣೆ ನಡೆಸುತ್ತಿದ್ದೇವೆಂದು ಹೇಳಿದ್ದಾರೆ. ಅವರು ತಮ್ಮ ಉತ್ತರದಲ್ಲಿ ಕ್ಲಿಯರ್ ಆಗಿ ಹೇಳಿದ್ದಾರೆ. ಆ ಬಗ್ಗೆ ತಾವು ಏನಾದರೂ ಕ್ಲಾರಿಫಿಕೇಶನ್ ಇದ್ದರೆ ಕೇಳಿ. ಅದು ಬಿಟ್ಟು ತಮ್ಮ ಹತ್ತಿರ ಇರುವ ರೇಕಾರ್ಡ್‌ಗಳನ್ನೆಲ್ಲಾ ಓದುತ್ತಾ ಹೋದರೆ ಹೇಗೆ? ನಿಮ್ಮ ಗಮನ ಸೆಳೆಯುವ ಸೂಚನೆಗೆ ಸಂಬಂಧಪಟ್ಟಂತೆ ಕ್ಲಾರಿಫಿಕೇಶನ್ ಕೇಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ — ಆಯಿತಂ ಸ್ವಾಮಿ. ಎರಡನೆಯದಾಗಿ ಟಾಕ್ಯಾನಾಯಕ್ ಮತ್ತು ಮೂಕ ನಾಗೇಂದ್ರಪ್ಪನವರ ಗಾಡಿಯಲ್ಲಿ ಏನಾದರೂ ಕಳ್ಳಸಾಗಾಣಿಕೆ ವಸ್ತುಗಳು ಇದ್ದವೇ? ಅಥವಾ ಬೇರೆ ಏನಾದರೂ ಇತ್ತೇ? ಮೂರನೆಯದಾಗಿ ಆ ರೀತಿ ಒಂದು ವೇಳೆ ಕಳ್ಳಸಾಗಾಣಿಕೆ ವಸ್ತುಗಳು ಇದ್ದರೆ ಆ ಗಾಡಿಯನ್ನು ಏತಕ್ಕೆ ವಾಪಸ್ಸು ಕಳುಹಿಸಿಕೊಟ್ಟಿರಿ? ಮತ್ತು ಅವರ ಮೇಲೆ ಕಳ್ಳಸಾಗಾಣಿಕೆಗೆ ಸಂಬಂಧಪಟ್ಟಂತೆ ಹಿಂದೆ ಕೇಸ್ ಏನಾದರೂ ಇದ್ದವೇ? ಈ ಬಗ್ಗೆ ನನಗೆ ದಯವಿಟ್ಟು ಉತ್ತರ ಕೊಡಿಸಬೇಕು. ಮತ್ತು ನಾನು ತಮ್ಮಲ್ಲಿ ಇನ್ನೊಂದು ವಿಷಯವನ್ನು ಪ್ರಸ್ತಾಪ ಮಾಡುವುದೇನೆಂದರೆ ಈ ಘಟನೆ ನಡೆದಂತಹ ಸಂದರ್ಭದಲ್ಲಿ ನಾನು ಪ್ರವಾಸದಲ್ಲಿ ಇದ್ದೆ. ಈ ಘಟನೆ ನನಗೆ ಗೊತ್ತಾದ ತಕ್ಷಣ ವಾಪಸ್ಸು ಬಂದು ಎಸ್.ಪಿ.ಯವರನ್ನು ಕಾಂಟ್ಯಾಕ್ಟ್ ಮಾಡಿ ಕೇಳಿದಾಗ ಅವರು ಹೇಳಿದರು ಇನ್ನೂ

ಕೇಸ್ ಹಾಕಿಲ್ಲವೇ? ಸ್ಥಳ ಪರಿಶೀಲನೆಯಾಗಿಲ್ಲವ? ಎಂದು ಆಶ್ಚರ್ಯ ವ್ಯಕ್ತಪಡಿಸಿದರು. ಆಮೇಲೆ ಡಿ.ಸಿ.ಯವರು ಮತ್ತು ಎಸ್.ಪಿ.ಯವರು ಬಂದು ಸ್ಥಳ ತನಿಖೆ ಮಾಡಿದಂತಹ ಸಂದರ್ಭದಲ್ಲಿ ಆಲ್ಲಿನ ಎಂಗ್ಡ ಜನರು ಬೋರ್‌ವೆಲ್‌ನ ಪಕ್ಕದಲ್ಲಿ ನಡೆದಂತಹ ಘಟನೆ ಬಗ್ಗೆ ಸಂಪೂರ್ಣವಾದ ವಿವರವನ್ನು ಡಿ.ಸಿ.ಯವರಿಗೆ ಮತ್ತು ಎಸ್.ಪಿ.ಯವರಿಗೆ ಕೊಟ್ಟರು. ಆ ವಿವರ ಪ್ರಜಾವಾಣಿ ಮತ್ತು ಸಂಯುಕ್ತ ಕರ್ನಾಟಕ ದಿನ ಪತ್ರಿಕೆಗಳಲ್ಲಿ ಸಹ ಬಂದಿದೆ...

ಅಧ್ಯಕ್ಷರು.— ತಾವು ಉತ್ತರಕ್ಕೆ ಸಂಬಂಧಪಟ್ಟ ಹಾಗೆ ಕ್ಲಾರಿಫಿಕೇಶನ್ ಕೇಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.— ನನಗೆ ಸರಿಯಾದ ಉತ್ತರವೇ ಬಂದಿಲ್ಲ. ಅದಕ್ಕೇ ಕೇಳುತ್ತಿದ್ದೇನೆ. ಡಿ.ಸಿ.ಯವರು ಮತ್ತು ಎಸ್.ಪಿ.ಯವರು ಬಂದು ಸ್ಥಳ ತನಿಖೆ ಮಾಡಿದಂತಹ ಸಂದರ್ಭದಲ್ಲಿ ಬೆತ್ತಲೆ ಮಾಡಿದ್ದು ನಿಜವೆಂದು ಆಲ್ಲಿನ ಜನ ಹೇಳಿದ್ದಾರೆ...

ಅಧ್ಯಕ್ಷರು.— ನೀವು ಈ ರೀತಿ ಕೇಳಿದರೆ ಮಂತ್ರಿಗಳು ಯಾವ ರೀತಿ ಉತ್ತರ ಕೊಡಬೇಕು? ನೀವು ಕ್ಲಾರಿಫಿಕೇಶನ್ ಕೇಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಬೆತ್ತಲೆಗೊಳಿಸಿದ್ದನ್ನು ಆಲ್ಲಿನ ೧೭ ವರ್ಷದ ಮೊಹಿಸಿನ್ ಮತ್ತು ಸುಜಾತ ಮತ್ತು ಇನ್ನಿತರರು ಸುಮಾರು ೧೫–೨೦ ಜನರು ಡಿ.ಸಿ. ಮತ್ತು ಎಸ್.ಪಿ.ಯವರಿಗೆ ತಿಳಿಸಿದ್ದಾರೆ. ಆ ರಿಪೋರ್ಟ್ ತಮಗೆ ಬಂದಿಲ್ಲವೆ?

MR. SPEAKER.— You are damaging your court case.

ಶ್ರೀ ಬಿ. ಎಸ್. ಯಡಿಯೂರಪ್ಪ.— ನಾನು ಕೋರ್ಟ್ ಬಗ್ಗೆ ಪ್ರಾತಿನಾಡಲಿಕ್ಕೆ ಹೋಗಲಿಲ್ಲ. ನಡೆದ ಘಟನೆ ಬಗ್ಗೆ ಹೇಳುತ್ತಿದ್ದೇನೆ. ಡಿ.ಸಿ. ಮತ್ತು ಎಸ್.ಪಿ.ಯವರು ಮಾಡಿದ ಸ್ಥಳ ತನಿಖೆ ರಿಪೋರ್ಟ್ ತಮ್ಮ ಪತ್ತಿರ ಇದೆಯೇ? ಠಾಕ್ರೆ ನಾಯಕ್ ಮತ್ತು ನಾಗೇಂದ್ರಪ್ಪನವರು ದಿನಾಂಕ ೧೬ರಂದು ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ತಮ್ಮನ್ನು ಭೇಟಿ ಮಾಡಿಸಲು ಕರೆದುಕೊಂಡು ಬಂದಾಗ ಅವರು ಹೇಳಿದ್ದುದು ಸುಳ್ಳೆ?

ಅಧ್ಯಕ್ಷರು.— ನೀವು ಕ್ಲಾರಿಫಿಕೇಶನ್ ಕೇಳಿ. ಅವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ —ನನಗೆ ಬೇಕಾದ ಉತ್ತರ ಬಂದಿಲ್ಲ. ನಾನು ನೇರವಾಗಿ ಎರಡೇ ಎರಡು ಕ್ಲಾರಿಫಿಕೇಶನ್ ಕೇಳ್ತೇನೆ. ಈ ವ್ಯಕ್ತಿಗಳಿಬ್ಬರ ಮೇಲೆ ಮರದ ಕಳ್ಳಸಾಗಾಣಿಕೆ ಹೀಗೆ ದೂರುಗಳು ಏನಾದರೂ ಇದ್ದವೇ? ದಿನಾಂಕ ೧೫ ೩–೮೯ರ ತನಕ ಯಾವ ಅಧಿಕಾರಿ ಹೋಗಿ ಸ್ಥಳ ತನಿಖೆ ಮಾಡಿದ್ದರು? ಈ ಘಟನೆ ಪತ್ರಿಕೆಗಳಲ್ಲಿ ಬಂದ ಮೇಲೂ ಯಾವ ಮಂತ್ರಿಯಾಗಲಿ ಅಥವಾ ಉನ್ನತ ಅಧಿಕಾರಿಯಾಗಲಿ ಇದುವರೆಗೂ ಯಾರೂ ಸ್ಥಳಕ್ಕೆ ಹೋಗಿಲ್ಲ ಇದಕ್ಕೆ ಕಾರಣವೇನು?

೨–೦೦ ಪಿ. ಎಂ.

ಡಿ.ಸಿ. ಮತ್ತು ಎಸ್.ಪಿ.ಯವರು ಈ ಬಗ್ಗೆ ಏನು ವರದಿ ಕೊಟ್ಟಿದ್ದಾರೆಂಬುದನ್ನು ತಿಳಿಸಿ.

ಮಾನ್ಯ ಅಧ್ಯಕ್ಷರೆ, ನಮ್ಮ ಸಾಗರ್ ಡಿವಿಜನ್ನಿನ ಡೆಪ್ಯೂಟಿ ಕನ್ಸರ್‌ವೇಟರ್ ಆಫ್ ಫಾರೆಸ್ಟ್, ಡೆಪ್ಯೂಟಿ ಸೂಪರಿಂಟೆಂಡ್ ಆಫ್ ಪೋಲೀಸ್, ಇವರುಗಳು ೨೮ನೇ ತಾರೀಖಿನ ಸ್ಥಳಕ್ಕೆ ಹೋಗಿ ಅಜಮಾಯಿಷಿ ಮಾಡಿಕೊಂಡು ಬಂದಿರುವ ಈ ವರದಿಯನ್ನು ತಮಗೆ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು.— ಈಗ ಗಮನ ಸೆಳೆಯುವ ಸೂಚನೆ ಎಂ. ಎಸ್. ನಾರಾಯಣರಾವ್ ಅವರದ್ದು.

ಶ್ರೀ ಬಿ. ಎಸ್. ಯಡಿಯೂರಪ್ಪ.— ಇದರ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳಲು ಎನ್‌ಕ್ವೈರಿ ಮಾಡಿ, ಅದಕ್ಕೆ ಹೊಣೆಯಾದವರನ್ನು ಸಸ್ಪೆಂಡ್ ಮಾಡಬೇಕು. ಏಕೆಂದರೆ ಇದು ಈ ರಾಜ್ಯದಲ್ಲಿ ದಲಿತರಿಗೆ ಬೆತ್ತಲೆ ಮಾಡಿದ ಪ್ರಕರಣ ಆಗಿದೆ.

ಶ್ರೀ ಬಿ. ರಾಚಯ್ಯ.— ದಲಿತರು, ದಲಿತರು ಎಂದು ಹೇಳುವುದಕ್ಕೆ ಹೋಗಬೇಡಿ ನಾನು ಈಗ ಹೇಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ನೀವು ಏನು ಬೇಕಾದರೂ ಹೇಳಿ. ನಾನು ಬೇಡ ಎನ್ನುವುದಿಲ್ಲ.

ಶ್ರೀ ಬಿ. ರಾಚಯ್ಯ.— ಮಾನ್ಯ ಅಧ್ಯಕ್ಷರೆ, ೧–೩–೧೯೮೯ರಲ್ಲಿ ಆತ ಅರ್ಜಿಯನ್ನು ಕೊಟ್ಟಿದ್ದಾನೆ. ಆ ಅರ್ಜಿಯು ವಿಚಾರಣೆಯಲ್ಲಿದೆ. ಅಲ್ಲಿ ಏಟು ತಿಂದಿರುವ ಅಸಿಸ್ಟೆಂಟ್ ಕನ್ಸರ್‌ವೇಟರ್ ಆಫ್ ಫಾರೆಸ್ಟ್

ರವರ ಅರ್ಜಿಯು ಅಲ್ಲಿ ಇದೆ. ಇವರಿಬ್ಬರ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡುತ್ತೇವೆಂದು ಹೇಳಿದ್ದೇನೆ. ಇವರು ಏಕೆ ಅಲ್ಲಿಯವರೆಗೆ ಕಾದಿದ್ದಾರೆಂದು ಕೇಳಿದ್ದಾರೆ. ೨೮-೨-೮೯ರಂದು ಆದಂತಹ ಈ ಒಂದು ಅರಣ್ಯ ಲೂಟಿ ಏನಿದೆ, ಆ ಲೂಟಿಯ ವಿಷಯದಲ್ಲಿ ಯಾರ್ಯಾರು ಸಂಬಂಧಪಟ್ಟಿದ್ದಾರೆ ಅವರನ್ನು ೧೨-೩-೮೯ರಲ್ಲಿ ಅರೆಸ್ಟ್ ಮಾಡಿದ್ದಾರೆ. ಅವರ ಹೆಸರನ್ನು ಈಗ ಬೇಕಾದರೆ ಓದಿ ಬಿಡುತ್ತೇನೆ. ಜಾತಿವಾರು ಬೇಕಾದರೆ ಓದುತ್ತೇನೆ.

ಶ್ರೀ ಬಿ. ಲಕ್ಕಪ್ಪ.— ಓದಿ ಹೇಳಿ ಇದರ ಬಗ್ಗೆ ನಮಗೂ ಕುತೂಹಲವಿದೆ.

ಅಧ್ಯಕ್ಷರು.— ಲಕ್ಕಪ್ಪನವರೆ ತಾವು ಕೂಡಿ.

ಶ್ರೀ ಬಿ. ರಾಜಯ್ಯ.— ಇದೆಲ್ಲಾ ಕೋರ್ಟ್ ಮುಂದೆ ಬರಂತ್ತದೆ ಬಿಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೆ, ತಾವು ನನ್ನ ರಕ್ಷಣೆಗೆ ಬರಬೇಕು. ನೀವು ನ್ಯಾಯಾಧೀಶರಿದ್ದೀರಿ, ನಾನು ಎರಡೇ ಸಂಗತಿಗಳ ಬಗ್ಗೆ ಕೇಳುತ್ತೇನೆ. ಮೊದಲನೆಯದಾಗಿ ಶ್ರೀಗಂಧವನ್ನು ಕಳ್ಳತನ ಮಾಡಿದವರ ಪಟ್ಟಿಯಲ್ಲಿ ಠಾಕ್ರಾನಾಯಕ ಮತ್ತು ನಾಗೇಂದ್ರಪ್ಪನವರ ಹೆಸರುಗಳು ಇದೆಯೋ? ಠಾಕ್ರಾನಾಯಕ್ ಮತ್ತು ನಾಗೇಂದ್ರಪ್ಪ ಇವರು ಈ ರೀತಿಯಲ್ಲಿ ಕಳ್ಳಸಾಗಾಣಿಕೆಯಲ್ಲಿ ಪಾಲ್ಗೊಂಡಿದ್ದಾರೆಯೇ? ಜೀಪಿನಲ್ಲಿ ಕರೆದುಕೊಂಡು ಹೋಗಿ ಬೆತ್ತಲೆ ಸೇವೆ ಮಾಡಿದ್ದಾರೆ. ಇದರ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳಲು ಸದನದ ಸಮಿತಿ ಮಾಡಬೇಕು.

ಅಧ್ಯಕ್ಷರು.— ಈ ಪ್ರಕರಣ ಕೋರ್ಟಿಗೆ ಹೋಗಿದೆ. ನೀವು ಕೋರ್ಟ್‌ಕೇಸನ್ನು ಹಾಳು ಮಾಡಿಕೊಳ್ಳಬೇಡಿ. ಇದರ ಬಗ್ಗೆ ಇಲ್ಲಿ ಅನವಶ್ಯಕ ವಿಚಾರಗಳನ್ನೆಲ್ಲಾ ಕೇಳಬೇಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.— ನಾನು ಕೋರ್ಟ್‌ನಲ್ಲಿ ಇರುವ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿಲ್ಲ. ನಾನು ಒಂದೇ ಒಂದು ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಅದೇನೆಂದರೆ ನಾಗೇಂದ್ರಪ್ಪ, ಠಾಕ್ರಾನಾಯಕರ ಮೇಲೆ ಕೇಸ್‌ಬುಕ್ ಮಾಡಿದ್ದೀರಾ, ಮಾಡಿದ್ದರೆ ಕೇಸ್ ನಂಬರ್ ಕೊಡಿ, ನಾಗೇಂದ್ರಪ್ಪ, ಠಾಕ್ರಾನಾಯಕ್ ಇವರೆಗೆ ಈ ರೀತಿಯ ಕಳ್ಳಸಾಗಾಣಿಕೆಯಲ್ಲಿ ತೊಡಗಿದಾರೆ ದಯವಿಟ್ಟು ಅವರ ವಿವರಣೆಯನ್ನು ಕೊಡಿ. ಅಲ್ಲಿನ ಎಸ್.ಪಿ. ಮತ್ತು ಡಿ.ಸಿ.ಯವರು ಸ್ಥಳ ಪರಿಶೀಲನೆ ಮಾಡಿದಾಗ ನಾನು ಇದ್ದೆ, ಹಾಗೂ ಪ್ರಜಾವಾಣಿ, ಸಂಯುಕ್ತ ಕರ್ನಾಟಕದ ವರದಿಗಾರರು ಇದ್ದರು. ಅಲ್ಲಿ ಬೆತ್ತಲೆ ಸೇವೆ ನಡೆದಿದ್ದುದು ನಿಜ, ಎ.ಸಿ.ಯವರು ಸ್ಥಳದಲ್ಲಿದ್ದಾರೆಂದು ಈ ಮಾತನ್ನು ಹೇಳಿದ್ದಾರೆ. ಇದು ಅಸತ್ಯವೆಂದು ಕಾಣಿಸಿದರೆ. ಸಸ್ಪೆಂಡ್ ಮಾಡಿ, ಸದ್ಯಕ್ಕೆ ಜ್ಯೂಡಿಷಿಯಲ್ ಎನ್‌ಕ್ವೈರಿ ಮಾಡುವುದು ಬೇಡ. ಸದನ ಸಮಿತಿ ಮಾಡಿ, ಅಲ್ಲಿಗೆ ಹೋಗಿ ತನಿಖೆ ಮಾಡಿಕೊಂಡು ಬರೋಣ.

ಶ್ರೀ ಬಿ. ರಾಜಯ್ಯ.— ಅವರ ಮೇಲೆ ನನಗೆ ನಂಬಿಕೆ ಇದೆ. ಅವರು ಜ್ಯುಡಿಷಿಯಲ್ ಎನ್‌ಕ್ವೈರಿ ಬೇಡ ಹಾಗೂ ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಬೇಡವೆಂದು ಹೇಳುತ್ತಾರೆ. ಇವತ್ತು ಎರಡೂ ಕಡೆಯೂ ಸತ್ಯಾಸತ್ಯತೆ ಈಚೆಗೆ ಬರಬೇಕಾಗಿದೆ. ಆದಕ್ಕಾಗಿ ಇವತ್ತು ಸಿ.ಓ.ಡಿ. ಎನ್‌ಕ್ವೈರಿ ಮಾಡಲು ನಾನು ಒಪ್ಪಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.— ದಯವಿಟ್ಟು ಸದನದ ಸಮಿತಿ ನೇಮಕ ಮಾಡಬೇಕು. ಆಗ ಇದರ ಸತ್ಯಾಸತ್ಯತೆ ಏನಿದೆ ಎಂಬುದನ್ನು ನಾವು ಪರಿಶೀಲನೆ ಮಾಡಬಹುದು.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಸಿ. ಓ. ಡಿ. ತನಿಖೆ ಆದರೆ ಅಧಿಕಾರಿಗಳು ಸತ್ಯವನ್ನು ಯಾವ ರೀತಿ ಬೇಕಾದರೂ ತಿರುಚಬಹುದು. ಆದ್ದರಿಂದ ಸದನದ ಸಮಿತಿ ಮಾಡಿ.

ಅಧ್ಯಕ್ಷರು.—ಈಗ ನಾನು ಮುಂದಿನ ವಿಷಯಕ್ಕೆ ಹೋಗುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅವರ ಉತ್ತರದಿಂದ ನಮಗೆ ಸಮಾಧಾನ ಆಗಿಲ್ಲ.

ಅಧ್ಯಕ್ಷರು.—ಇದರಿಂದ ನೀವು ಏನು ಮಾಡಬೇಕೆಂದಿದ್ದೀರಿ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಒಂದು ಮಾತು ಕೇಳುವುದಕ್ಕೆ ಅವಕಾಶ ಮಾಡಿಕೊಡಿ.

(ಗೊಂದಲ)

ಅಧ್ಯಕ್ಷರು.—ಈಗ ನಾರಾಯಣ್‌ರಾವ್ ಅವರ ಗಮನ ಸೆಳೆಯುವ ಸೂಚನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಜವಾಬ್ದಾರಿ ಸ್ಥಾನದಿಂದ ಹೇಳುತ್ತಿದ್ದೇನೆ.

ಅಧ್ಯಕ್ಷರು.—ನಿಮಗೆ ನಾನು ಸಾಕಷ್ಟು ಅವಕಾಶ ಕೊಟ್ಟಿದ್ದೇನೆ. ಮಂತ್ರಿಗಳು ಸಮರ್ಪಕವಾಗಿ ಉತ್ತರ ಕೊಟ್ಟಿದ್ದಾರೆ. ಸಿ. ಓ. ಡಿ. ಎನ್‌ಕ್ವೈರಿಯನ್ನೂ ಸಹ ಮಾಡಿಸುತ್ತೇನೆಂದು ಒಪ್ಪಿದ್ದಾರೆ.

ಶ್ರೀ ಬಿ. ರಾಚಯ್ಯ.—ಸಿ. ಓ. ಡಿ. ತನಿಖೆ ಬೇಕಾದರೆ ಮಾಡಿಸುತ್ತೇನೆ. ಅವರು ಹೇಳಿರುವುದಕ್ಕೂ ನಾನು ಹೇಳಿರುವುದಕ್ಕೂ ವ್ಯತ್ಯಾಸ ಇದ್ದರೆ ಅದು ಹೊರಗಡೆ ಬರಲಿ.

ಶ್ರೀ ಬಿ.ಎಸ್ ಯಡಿಯೂರಪ್ಪ.— ಅಧ್ಯಕ್ಷರೆ ನನ್ನದು ಏನು ಪ್ರಾರ್ಥನೆ ಎಂದರೆ, ನನ್ನ ಪಾಯಿಂಟ್‌ಗೆ ಅವರು ಉತ್ತರವನ್ನೇ ಕೊಡಲಿಲ್ಲ.

ಅಧ್ಯಕ್ಷರು.—ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಸಿ.ಓ.ಡಿ. ತನಿಖೆ ಮಾಡುವುದಾದರೆ ತಪ್ಪಿತಸ್ಥ ಅಧಿಕಾರಿಯನ್ನು ಮೊದಲು ಸಸ್ಪೆನ್‌ಷನ್‌ನಲ್ಲಿ ಇಟ್ಟು ಎನ್‌ಕ್ವೈರಿ ಮಾಡಲಿ.

ಶ್ರೀ ಬಿ. ರಾಚಯ್ಯ.—ಸಸ್ಪೆನ್‌ಷನ್ ಮಾಡುವುದಕ್ಕಾಗುವುದಿಲ್ಲ. ಬೇರೆ ಕಡೆ ವರ್ಗಾ ಮಾಡುತ್ತೇನೆ. ಈ ಅಧಿಕಾರಿ ಯಾವ ರೀತಿ ಕೆಲಸಗಳನ್ನು ಮಾಡಿದ್ದಾರೆಂದು ಹೇಳಿದರೆ, ಅವರನ್ನು ಸಸ್ಪೆಂಡ್ ಮಾಡಬೇಕೋ ಅವರಿಗೆ ಪ್ರೋತ್ಸಾಹ ಕೊಡಬೇಕೋ ಎಂದು ನೀವೇ ಹೇಳುತ್ತೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ತಪ್ಪಿತಸ್ಥ ಅಧಿಕಾರಿಗಳ ಮೇಲೆ ಸಿ.ಓ.ಡಿ. ಎನ್‌ಕ್ವೈರಿ ಮಾಡಿದ ಒಂದೂ ರಿಪೋರ್ಟ್ ಹೊರಗಡೆ ಬಂದಿಲ್ಲ. ಈ ಅಧಿಕಾರಿ ಶಾಮೀಲಾಗಿರುವುದರಿಂದ ಇವರನ್ನು ಸಸ್ಪೆಂಡ್ ಮಾಡಬೇಕು ಆಮೇಲೆ ಸಿ.ಓ.ಡಿ. ಎನ್‌ಕ್ವೈರಿ ಮಾಡಬೇಕು.

ಶ್ರೀ ಬಿ. ರಾಚಯ್ಯ.—ದಯವಿಟ್ಟು ಇನ್ನು ಹೆಚ್ಚು ಹೇಳಬೇಡಿ. ನೀವು ಯಾರನ್ನೂ ಹೆದರಿಸಿ ಕೊಂಡು ಮಾತುವ ಕೆಲಸ ಇದಲ್ಲ. ಎನ್‌ಕ್ವೈರಿ ಮಾಡಿಸುತ್ತೇನೆ. ನಿಜ ಹೊರಗೆ ಬರಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಸತ್ಯ ಹೊರಗಡೆ ಬರುವುದಿಲ್ಲ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಒಂದು ಸದನದ ಸಮಿತಿಯನ್ನು ಮಾಡಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಅವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಆ ಅಧಿಕಾರಿಯನ್ನು ಸಸ್ಪೆಂಡ್ ಮಾಡಿ ಎನ್‌ಕ್ವೈರಿ ಮಾಡಿಸಿ. ಇಲ್ಲ ಅಂದರೆ ಒಂದು ಸದನದ ಸಮಿತಿಯನ್ನು ಮಾಡಿ ಆಗ ಸತ್ಯ ಹೊರಗೆ ಬರುತ್ತದೆ.

ಅಧ್ಯಕ್ಷರು.—ಇಂಥಾದ್ದಕ್ಕೆಲ್ಲಾ ಸದನದ ಸಮಿತಿ ಮಾಡಿದರೆ ದಿನಾ ಒಂದೊಂದು ಸಮಿತಿ ಮಾಡ ಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ದಲಿತರ ಮೇಲೆ ಬೀದಿಯಲ್ಲಿ ದೌರ್ಜನ್ಯ ಮಾಡಿ ಬೆತ್ತಲೆ ಮೆರವಣಿಗೆ ಮಾಡಿದ್ದಾರೆ. ಸಿ.ಓ.ಡಿ. ತನಿಖೆಯಿಂದ ನ್ಯಾಯ ಹೊರಗಡೆ ಬರುವುದಿಲ್ಲ. ಈ ಬಗ್ಗೆ ನಾನು ಧರಣಿ ಕುಳಿತುಕೊಳ್ಳುವವರೆಗೂ ಎಸ್.ಪಿ. ಯವರು ಮತ್ತು ಕನ್‌ಸರ್‌ವೇಟರ್ ಅವರು ಸ್ಥಳಕ್ಕೆ ಹೋಗಿರಲಿಲ್ಲ. ೧೫ ದಿವಸ ಆದ ಮೇಲೆ ಅವರು ತನಿಖೆ ಮಾಡಿದ್ದಾರೆ.

ಅಧ್ಯಕ್ಷರು.—ನೀವು ಏನೇ ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಏಕೆ ಹೋಗುವುದಿಲ್ಲ ? ಸಿ. ಓ. ಡಿ. ತನಿಖೆ ಮಾಡುವ ಬದಲು ಸದನದ ಸಮಿತಿಯನ್ನು ಮಾಡಿದರೆ ಸತ್ಯ ಏನೆಂದು ಹೊರಗೆ ಬರುತ್ತದೆ. ಏಕೆಂದರೆ, ಈಗ ಇವರು ಕೊಟ್ಟಿರುವ ಉತ್ತರ ಸತ್ಯಕ್ಕೆ ದೂರವಾದುದು. ಇವರು ಕೊಟ್ಟಿರುವ ಉತ್ತರದಲ್ಲಿ ಟಕ್ಕಾ ನಾಯಕ್ ಮತ್ತು ನಾಗೇಂದ್ರಪ್ಪನವರ ಬಗ್ಗೆ ಒಂದು ಶಬ್ದವೂ ಇಲ್ಲ. ನಾನು ಕೇಳಿರುವ ವಿಷಯವೇ ಬೇರೆ. ಅವರು ಇಬ್ಬರೂ ಕಳ್ಳಸಾಗಣೆದಾರರಲ್ಲ.

ಅಧ್ಯಕ್ಷರು.—ನಥಿಂಗ್ ವಿಲ್ ಬಿ ರೆಕಾರ್ಡೆಡ್.

ಶ್ರೀ ಬಿ. ಎಸ್. ಯಡಿಯೂರಪ್ಪ.—ಬೇರೆ ರೀತಿಯ ಯಾವುದೇ ತನಿಖೆ ಬೇಡ. ಸದನದ ಸಮಿತಿಯನ್ನು ಮಾಡಿ. ಲಕ್ಷಾಂತರ ಜನರು ಇವತ್ತು ನೋಡುತ್ತಿದ್ದಾರೆ. ಜನರಿಗೂ ಸತ್ಯ ಗೊತ್ತಾಗಲಿ.

ಶ್ರೀ ಬಿ. ರಾಚಯ್ಯ.—ಅತ್ಯಾಚಾರದ ವಿಚಾರ ಬಂದಾಗ ದಲಿತರ ಹೆಸರು ತರುತ್ತಾರೆ. ಯಾವುದೇ ವಿಷಯ ಬಂದರೂ ದಲಿತರ ಹೆಸರು ತರುತ್ತಾರೆ. ಈ ರೀತಿ ದಲಿತರ ಹೆಸರುಗಳನ್ನು ಹೇಳಿ ಮಾನ್ಯ ಸದಸ್ಯರುಗಳ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನ ಮಾಡಬೇಡಿ. ಶಿಕಾರಿಪುರದಲ್ಲಿ ಎಷ್ಟು ಅರಣ್ಯ ಲೂಟಿ ಆಗಿದೆ ಎಂಬ ಬಗ್ಗೆ ಹೇಳಿದರೆ ನಿಮಗೆ ಗೊತ್ತಾಗುತ್ತದೆ. ನಿಷ್ಪಕ್ಷಪಾತವಾಗಿ ಮತ್ತು ಪ್ರಾಮಾಣಿಕತೆಯಿಂದ ತನ್ನ ಪ್ರಾಣದ ಹಂಗನ್ನೇ ತೊರೆದು ಯಾವ ರೀತಿ ಈ ಅಧಿಕಾರಿ ಕೆಲಸ ಮಾಡಿದ್ದಾರೆ. ಇಂಥ ಒಳ್ಳೆಯ ಅಧಿಕಾರಿಯ ಒಳ್ಳೆಯ ಕೆಲಸಗಳಿಗೆ ಪ್ರೋತ್ಸಾಹ ಕೊಡದಿದ್ದರೆ ಸರ್ಕಾರ ಕರ್ತವ್ಯ ಲೋಪ ಮಾಡಿದ ಹಾಗೆ ಆಗುತ್ತದೆ. ನಿಜವಾಗಿ ಅವನು ತಪ್ಪಿತಸ್ಥ ಎಂದು ತನಿಖೆಯಲ್ಲಿ ಗೊತ್ತಾದರೆ ಅವನನ್ನು ಡಿಸ್ಮಿಸ್ ಮಾಡುವುದಕ್ಕೂ ನಾನು ತಯಾರಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ,.....

ಅಧ್ಯಕ್ಷರು.—ನೀವು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

(ಮಾನ್ಯ ಸದಸ್ಯರಾದ ಶ್ರೀ ಬಿ. ಎಸ್. ಯಡಿಯೂರಪ್ಪನವರು ಸಭಾಧ್ಯಕ್ಷರ ಮುಂಭಾಗದಲ್ಲಿರುವ ಅವರಣದೊಳಗೆ ಪ್ರವೇಶ ಮಾಡಿದರು.)

ಅಧ್ಯಕ್ಷರು.—ನೀವು ನಿಮ್ಮ ಜಾಗಕ್ಕೆ ಹೋಗಿ.

(ಗೊಂದಲ)

ಅಧ್ಯಕ್ಷರು.—ನೀವು ಏನೇ ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರು ಗಮನ ಸೆಳೆಯುವ ಸೂಚನೆಯು ವಾಪಸ್ಸಾತಿ ವಾಯಿತು. ಮಾನ್ಯ ಎಂ.ಎಸ್. ನಾರಾಯಣರಾವ್‌ರವರು ತಮ್ಮ ಗಮನ ಸೆಳೆಯುವ ಸೂಚನೆಯನ್ನು ಮಂಡಿಸಿ.

(ಈ ಹಂತದಲ್ಲಿ ಮಾನ್ಯ ಶ್ರೀ ಬಿ. ಎಸ್. ಯಡಿಯೂರಪ್ಪನವರು ಮಾತನಾಡುವುದನ್ನು ರೆಕಾರ್ಡ್ ಮಾಡಿಕೊಳ್ಳಬೇಡಿರಿಂತೆ ಅಧ್ಯಕ್ಷರು ಆದೇಶಿಸಿದರು)

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ಸರಕಾರದಲ್ಲಿ ದಲಿತರಿಗೆ ನ್ಯಾಯ ಸಿಗುತ್ತಾ ಇಲ್ಲ, ಇದನ್ನು ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು.)

ಏಯ್ಡ್ಸ್ ರೋಗಾಣುಗಳಿಂದ ಕೂಡಿದ ಔಷಧಿಗಳನ್ನು ಮಹಿಳೆಯರಿಗೆ ನೀಡಿರುವ ಬಗ್ಗೆ ಹಾಗೂ ನಿವಾರಣಾ ಕ್ರಮ ಕೈಗೊಳ್ಳುವಲ್ಲಿ ಸರ್ಕಾರದ ವಿಫಲತೆ.

ಶ್ರೀ ಎಂ. ಎಸ್. ನಾರಾಯಣರಾವ್.—ಮಾನ್ಯ ಅಧ್ಯಕ್ಷರೇ, ಏಡ್ಸ್ ರೋಗಾಣುಗಳಿಂದ ಕೂಡಿದ ಔಷಧಿಗಳನ್ನು ಸರಿಸುಮಾರು ೧೨೦ ಮಹಿಳೆಯರಿಗೆ ನೀಡಿರುವ ಬಗ್ಗೆ ಹಾಗೂ ನಿವಾರಣಾ ಕ್ರಮ ಕೈಗೊಳ್ಳುವಲ್ಲಿ ಸರ್ಕಾರದ ವಿಫಲತೆಯ ಬಗ್ಗೆ ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜೆ. ಎಸ್. ದೇಶಮುಖ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—ಮಾನ್ಯ ಅಧ್ಯಕ್ಷರೆ, ಏಡ್ಸ್ ರೋಗಾಣುಗಳು ಅಂದರೆ ಏಡ್ಸ್ ವೈರಸ್‌ನಿಂದ ಕೂಡಿದ ಔಷಧಿಗಳು ಕರ್ನಾಟಕದಲ್ಲಿ ಮಾರಾಟವಾಗಿರುವುದು ನಿಜವಾದ ಸಂಗತಿಯಲ್ಲ. ಕರ್ನಾಟಕ ರಾಜ್ಯದ ಹೊರಗಡೆ ತಯಾರಿಸಲ್ಪಟ್ಟಿರುವ ಏಡ್ಸ್ "ಅಂಟಿಬಾಡಿನಿಂದ" ಕೂಡಿದ ಇಮ್ಯಾನೊ ಗ್ಲೂಬುಲಿನ್ಸ್ ಮತ್ತು ಸೀರಮಬೇಸ್ಡ್ ಔಷಧಿಗಳು ಮಾರಾಟವಾಗಿರುವುದು ಜನವರಿ ೧೯೮೯ರಲ್ಲಿ ವರದಿಯಾಗಿದೆ. ದೋಷಯುಕ್ತವಾದ ಈ ಔಷಧಿಗಳನ್ನು ಮಾರಾಟವನ್ನು ಪ್ರತಿಬಂಧಿಸಲು ಹಾಗೂ ಇಂತಹ ಔಷಧಿ